ಬಂತು. ಯಾಕೋ ಅವಮಾನವಾದಂತೆನಿಸಿತು. ನಾನೂ ಗೌತಮಿ ಓಡಿದೆವು.

ಸಿದ್ಧಾರ್ಥ ಕಾಷಾಯವಸ್ತ್ರ ಧರಿಸಿ, ತನ್ನ ಶಿಷ್ಯರೊಂದಿಗೆ ಬೋಗುಣಿ ಹಿಡಿದು ಮನೆಮನೆಯ ಮುಂದೆ ಭಿಕ್ಷೆ ಬೇಡುತ್ತಿದ್ದುದನ್ನು ನಾವು ಕಣ್ಣಾರೆ ಕಂಡೆವು! ದಷ್ಟಪುಷ್ಟನಾಗಿದ್ದ ಸಿದ್ಧಾರ್ಥ, ಹೊಟ್ಟೆಯೆನ್ನುವುದು ಬೆನ್ನಿಗೆ ಅಂಟಿಕೊಂಡಂತೆ ಕೃಶನಾಗಿ ಹೋಗಿದ್ದ. ಎತ್ತರದ ನಿಲುವಿನ ಆತನ ದೇಹ ಸ್ವಲ್ಪ ಬಾಗಿತ್ತು. ಕುತ್ತಿಗೆಯೂ ಅಲ್ಪ ಬಾಗಿದಂತೆ ಭಾಸವಾಯಿತು. ಆದರೆ ಅದೇ ನೀಳ ಮೂಗು. ಮುಖದಲ್ಲಿ ಮಾತ್ರ ಎಂಥ ತೇಜಸ್ಸು! ಮೊದಲೇ ರಾಜಕಳೆಯ ಮುಖದಲ್ಲಿ ಧ್ಯಾನತಪಸ್ಸಿನ ಪ್ರಭೆಯೂ ಸೇರಿ ಮುಖದಲ್ಲಿ ಉಜ್ವಲ ಕಾಂತಿ ಮಿನುಗುತ್ತಿತ್ತು. ನನ್ನನ್ನು ನೋಡಿ, ಗೌತಮಿಯನ್ನು ನೋಡಿ ಆತ ಮುಗುಳ್ನಕ್ಕ. ಯಾರನ್ನು ಕಂಡರೂ ಅಷ್ಟೇ, ಅದೇ ಮಂದಹಾಸ. ಅಯ್ಯೋ, ನಮ್ಮ ರಾಜಕುಮಾರ, ನಮ್ಮ ಮನೆ ಬಾಗಿಲಿಗೆ ಬಂದು ಭಿಕ್ಷೆ ಬೇಡುತ್ತಿರುವವರು ಎಂದು ಎಲ್ಲರೂ ಸಂಭ್ರಮದಿಂದ ತುಂಬಿ ತುಂಬಿ ನೀಡುತ್ತಿದ್ದರೆ, ಇವತ್ತಿನ ಊಟಕ್ಕೆ ಇಷ್ಟೇ ಸಾಕು ಎಂದು ಸಿದ್ಧಾರ್ಥ ಶಿಷ್ಯರಿಗೆಲ್ಲಾ ಹಂಚಿ, ಅವತ್ತಿನ ಭಿಕ್ಷಾಟನೆ ನಿಲ್ಲಿಸಿಬಿಟ್ಟ.

ಇದೇನಿದು ಸಿದ್ಧಾರ್ಥ, ನೀನು ಬೀದಿಬದಿಯಲ್ಲಿ ಭಿಕ್ಷಾಟನೆ ಮಾಡಬೇಕೇ? ಅರಮನೆಯಲ್ಲಿ ನಿನಗಾಗಿ, ನಿನ್ನ ಪರಿವಾರದವರಿಗಾಗಿ ವಿವಿಧ ರೀತಿಯ ಭಕ್ಷ್ಯಭೋಜ್ಯಗಳು ತಯಾರಾಗಿ ಕಾಯುತ್ತಿವೆ ಎಂದಾಗ ನನ್ನ ಕಡೆ ನೋಡಿ ಮುಗುಳ್ನಕ್ಕು, 'ಭಿಕ್ಷೆ ಬೇಡುವುದು ಭಿಕ್ಕುಗಳ ಮೂಲಭೂತ ಕರ್ತವ್ಯ ಮಹಾರಾಜರೇ...' ಎಂದುಬಿಟ್ಟ. ಆತ ಮಹಾರಾಜರೇ ಎಂದುದರಲ್ಲಿ ವ್ಯಂಗ್ಯವಿತ್ತೇ? ಅಥವಾ ನಿನಗೂ ನನಗೂ ಏನೇನೂ ಸಂಬಂಧವಿಲ್ಲ ಎಂಬ ವೈರಾಗ್ಯವಿತ್ತೇ? ಕನಿಷ್ಠ ಅಪ್ಪಅಮ್ಮನೆಂಬ ಪ್ರೀತಿ ಆದರವನ್ನಾದರೂ ತೋರಲಿಲ್ಲವೆಂದು ಗೌತಮಿ ಕಣ್ಣೀರು ಹಾಕಿದಳು. ಆದರೆ ಆತನದು ನಿರ್ಲಿಪ್ತ ಮನೋಭಾವ. ಅದರಲ್ಲಿ ನೀನು ರಾಜನಾದರೂ ಅಷ್ಟೇ, ತಂದೆಯಾದರೂ ಅಷ್ಟೇ ಎಂಬ ಧ್ವನಿ ಅಡಗಿತ್ತೇನೋ ಗೊತ್ತಿಲ್ಲ.

ಭಿಕ್ಕುಗಳೆಲ್ಲರ ಜೊತೆ ಸಿದ್ಧಾರ್ಥ ತಾನು ಹುಟ್ಟಿ ಬೆಳೆದ ಮನೆಗೆ ಬಂದ. ಇಲ್ಲಿ ಆಡಿದ್ದೆ, ಇಲ್ಲಿ ಹಾಡಿದ್ದೆ; ಇಲ್ಲಿ ಕುಳಿತಿದ್ದೆ, ಇಲ್ಲಿ ಮಲಗಿದ್ದೆ ಎಂಬ ಯಾವ ವ್ಯಾಮೋಹವೂ ಆತನ ಮುಖದಲ್ಲಿ ವ್ಯಕ್ತವಾಗಲಿಲ್ಲ. ಎಲ್ಲ ಮೆತ್ತನೆಯ ಪೀಠಗಳನ್ನು ನಿರಾಕರಿಸಿ, ಆಪು ಹುಲ್ಲಿನ ಚಾಪೆ ಹಾಸಿಕೊಂಡು ಕುಳಿತರು. ಎಲ್ಲರನ್ನೂ ಗುರುತಿಸಿದ ಗೌತಮ. ಕೇವಲ ಆರು ವರ್ಷಗಳಲ್ಲಿ ಎಲ್ಲರನ್ನೂ ಅದು ಹೇಗೆ ಮರೆಯಲು ಸಾಧ್ಯ? ಇಡೀ ಕಪಿಲವಸ್ತುವಿನ ತುಂಬಾ ಸಿದ್ಧಾರ್ಥ ಬಂದಿರುವನೆಂಬ ಸುದ್ದಿ ಕಾಡ್ಗಿಚ್ಚಿನಂತೆ ಹರಡಿತು. ಎಲ್ಲರೂ ಸಾಲು ಸಾಲಾಗಿ ಬಂದು ಆತನ ಕಾಲಿಗೆರಗಿ ಆಶೀರ್ವಾದ ಪಡೆಯುವವರೇ! ಒಂದು ಕ್ಷಣ ನನಗೂ ಗೌತಮಿಗೂ, ನಾವೂ ಆತನ ಕಾಲಿಗೆರಗಬೇಕೇ ಎಂಬ ಸಂಶಯ ಮೂಡಿತು. ಆಕೆ ಏನು ಮಾಡಬೇಕೆನ್ನುವಂತೆ ನನ್ನ ಮುಖ ನೋಡಿದಳು. ಮಗಧದ ಬಿಂಬಸಾರನೇ ಬುದ್ಧನಾದ ಗೌತಮನ ಕಾಲಿಗೆರಗಿದನಂತೆ. ಆದರೆ ಯಾಕೋ ಅದು ನನಗೆ ಮುಜುಗರವೆನ್ನಿಸಿ ಸುಮ್ಮನಾದೆ. ನನ್ನ ಆ ಆಲೋಚನಾ ಸರಣಿಯನ್ನು ತುಂಡರಿಸುವವನಂತೆ— 'ಯಶೋಧರೆ ಎಲ್ಲಿ?' ಎಂದು ಕೇಳಿದ. ಎಲ್ಲರೂ ಬಂದು ನೆರೆದಿದ್ದರೂ ಆಕೆ ಮಾತ್ರ ಬಂದಿರದಿದ್ದುದು ಆಗಲೇ ನನ್ನ ಅರಿವಿಗೂ ಬಂದದ್ದು.

## ಯಶೋಧರೆ

ಆರು ವರುಷ, ಆರು ದಶಕಗಳಂತೆ ಕಾದಿದ್ದೆ, ಸಿದ್ಧಾರ್ಥ ಈಗ ಬರುವನೆಂದು, ಆಗ ಬರುವನೆಂದು. ಆತನಿಗಾಗಿ ದಿನವೂ ನಾನು ಉಣ್ಣುವ ಅನ್ನದ ಅರ್ಧದಷ್ಟನ್ನು ತೆಗೆದಿರಿಸುತ್ತಿದ್ದೆ, ಅಕಸ್ಮಾತ್ ಬಂದರೆ ಹಸಿದು ಮಲಗಬಾರದೆಂದು. ರಾಹುಲ ಕೇಳುತ್ತಿದ್ದ ರೈತರಾದ ನಾವೇ ಅನ್ನವನ್ನು ಹಾಗೆ ಪೋಲು ಮಾಡಬಹುದೇ ಎಂದು. ಆದರೆ ಅದರ ಹಿಂದಿನ ಭಾವನೆಯನ್ನು ಅವನಿಗಾದರೂ ಹೇಗೆ ತಿಳಿಸಿ ಹೇಳಲಿ? ಸಿದ್ಧಾರ್ಥ ನಮ್ಮನ್ನು ತ್ಯಜಿಸಿ ಹೊರಟಾಗ ರಾಹುಲ ಇನ್ನೂ ಮೊಲೆಯೂಡುವ ಕೂಸು. ಯಾವುದೋ ಸುಖದ ಕನಸು ಕಾಣುತ್ತಾ, ಮುಗುಳ್ನಗುತ್ತಾ ಮಲಗುತ್ತಿದ್ದಂಥ ವಯಸ್ಸು. ಈಗ ಎಲ್ಲವೂ ಅವನಿಗೂ ಅರ್ಥವಾಗುತ್ತಿದೆ. ಅಪ್ಪ ಯಾರು ತೋರು ಎಂದು ಕೇಳುತ್ತಿದ್ದಾನೆ. ಪೂರ್ವಾಶ್ರಮದ ಪತ್ನಿಯನ್ನು ಸನ್ಯಾಸಿಗಳು ನೋಡಬಾರದೆಂಬ ನಿಯಮವಿದೆಯೆಂದು ಕೇಳಿದ್ದೇನೆ. ಆದರೆ ಗೌತಮನ ವಿಷಯ ಹೇಗೋ ಗೊತ್ತಿಲ್ಲ. ನಾನಾಗಿಯೇ ಹೋಗಬಾರದು, ಆತನಾಗಿಯೇ ಬಂದರೆ ಬರಲಿ. ಇಲ್ಲದಿದ್ದರೆ ಇರುವುದಿಷ್ಟೇ ಭಾಗ್ಯ ಎಂದು ಸುಮ್ಮನಾಗುವುದು ಎಂದು ನಿರ್ಧರಿಸಿದ್ದೆ. ಆದರೆ ಸ್ವತಃ ಸಿದ್ಧಾರ್ಥನೇ ನನ್ನನ್ನು ಕಾಣಲು ಬರುತ್ತಿದ್ದಾನೆಂಬ ಸುದ್ದಿ ಬಂತು.

ಅವಕುಂಠನದ ಮರೆಯಿಂದ ನೋಡಿದೆ. ಒಂದು ತೇಜೋಪುಂಜ, ಒಂದು ಬೆಳಕಿನ ಬೃಹತ್ ಬೆಟ್ಟವೇ ನನ್ನೆಡೆಗೆ ನಡೆದು ಬರುತ್ತಿರುವಂತೆ ಭಾಸವಾಯಿತು! ಸಿದ್ಧಾರ್ಥ ಸೀದಾ ನನ್ನ ಕೋಣೆಗೇ ಬಂದ, ನಾನು ಆತನನ್ನು ಕಾಣಲು ಹೋಗಲಿಲ್ಲವೆಂದು. ನನಗೋ ನಾಚಿಕೆಯೋ, ಸಂಕೋಚವೋ, ಅವಮಾನವೋ ಯಾವುದೋ ಒಂದು ಆತನನ್ನು ಕಾಣಲು ಹೋಗುವುದನ್ನು ತಡೆದಿತ್ತು. ಅದೇ ಹಳೇ ಸಲಿಗೆಯಲ್ಲಿ, ಇನ್ನೂ ನನ್ನ ನೆನಪಿದೆಯೇ ಎಂದು ಕೇಳಬೇಕೆಂದುಕೊಳ್ಳುವಷ್ಟರಲ್ಲಿ, 'ಇನ್ನೂ ನನ್ನ ಮೇಲೆ ಸಿಟ್ಟು ಹೋಗಿಲ್ಲವೇ?' ಎಂದು ಕೇಳಿದ. ಏನೆಂದು ಉತ್ತರಿಸಲಿ? ಅಂದು ನಾನು ಬೀಳ್ಕೊಡದಿದ್ದಲ್ಲಿ ಇಂದು ನೀವು ಇಷ್ಟು ದೊಡ್ಡ ಭಿಕ್ಕುವಾಗಲು ಸಾಧ್ಯವಿತ್ತೇ ಎಂದು ಹೇಳಬೇಕೆಂದುಕೊಂಡೆ. ಆಗಲೇ, 'ಸಿದ್ಧಾರ್ಥನ ಪತ್ನಿಯಂತೆ!' ಎಂದು ನೋಡಲು ಹತ್ತಾರಲ್ಲ, ನೂರಾರು ಶಿಷ್ಯಂದಿರು ಹಿಂಬಾಲಿಸಿ ಕುತೂಹಲದಿಂದ ನನ್ನತ್ತ ನೋಡುತ್ತಿದ್ದರು.

ಅಷ್ಟು ದೊಡ್ಡ ಪ್ರಖರ ಪ್ರಾಕಾರದ ಮುಂದೆ ನಾನು ಕತ್ತಲೆಯ ಕೂಪದಲ್ಲಿ ಮುಳುಗಿರುವಂತೆ ಭಾಸವಾಯಿತು. ಇವನೇನಾ ಅಂದು ಹಣೆ, ಗಲ್ಲ, ಎದೆಗಳ ಮೇಲೆಲ್ಲಾ ಸಿಹಿಮುತ್ತನ್ನೊತ್ತಿದ್ದವನು? ಈ ಇವನೇನಾ ನನ್ನಲ್ಲಿ ರೋಮಾಂಚನವನ್ನಂಕುರಿಸಿ ಹದಿಮೂರು ವರ್ಷಗಳ ಕಾಲ ತನ್ನ ಮೈಬಿಸಿಯಿಂದ ಇರುಳ ಹಗುರಾಗಿಸಿದ್ದವನು? ಇವನೇನಾ ಬೆಳದಿಂಗಳ ಹಾಲ ಕುಡಿದವನಂತೆ ಬದುಕಿದ್ದವನು?

ರಾಹುಲ ಆತನ ಮುಖ ನೋಡಿದವನೇ ನನ್ನೆಡೆಗೆ ತಿರುಗಿ ಸ್ನಿಗ್ಧ ನಗೆ ನಕ್ಕ. ನನ್ನ ಎದೆ ಡಮರುಗ ಬಾರಿಸುತ್ತಿತ್ತು. 'ಜಗದೆಲ್ಲ ಬಂಧನವನು ಮೀರಲು ನಿನ್ನ ತ್ಯಾಗವೇ ಕಾರಣ, ನಿನ್ನಿಂದ ಮುಕ್ತನಾದ ಮೇಲೆ ಈ ಜಗದ ಇನ್ನಾವ ಬಂಧನಗಳೂ ನನಗೆ ಮಿಗಿಲೆನಿಸಲಿಲ್ಲ. ಶರಣು ನಿನಗೆ...' ಎಂದವನೇ, 'ಸಮಾಧಾನವೇ...' ಎಂದೂ ಕೇಳಿದ. ನನ್ನ ಕೊರಳು ತುಂಬಿ ಬಂದು ನಾನು ಗದ್ಗದಿತಳಾದೆ. ನನ್ನ ಕಣ್ಣ ಮೌನವೇ ಎಲ್ಲವನ್ನೂ ಹೇಳುವಂತಿತ್ತು. ಕಣ್ಣಂಚಲಿ ನೀರು ತುಂಬಿ ಬಂತು. ಅದು ಆನಂದದ್ದೋ ನೋವಿನದ್ದೋ ತಿಳಿಯಲಿಲ್ಲ. ನಾನು ನನ್ನನ್ನೂ ಭಿಕ್ಕುವಾಗಿ ನಿಮ್ಮೊಂದಿಗೆ ಕರೆದೊಯ್ಯಿರೆಂದು ಅವರ ಕಾಲ ಮೇಲೆ ಶರಣುಬಿದ್ದೆ. ರಾಹುಲನಿಗೂ ಹಾಗೇ ಮಾಡಿಸಿದೆ. ಯಾವಾಗಲೂ ತಂದೆ ಎಲ್ಲಿ ಎಂದು ಕೇಳುತ್ತಿದ್ದವನು ಇಂದು ಮಾತ್ರ ಅದೇಕೋ ಇವರಾರು ಎಂದು ಕೇಳಲಿಲ್ಲ.

ಅಷ್ಟರಲ್ಲಿ ಅಲ್ಲಿಗೆ ಬಂದ ಮಾವ ಶುದ್ಧೋದನರು, ಮಗ ನಂದನನಿಗೆ ಪಟ್ಟಾಭಿಷೇಕದ ವೇಳೆ ಅನುಗ್ರಹಿಸಿಯೇ ತೆರಳಬೇಕು ಎಂದು ಕೇಳಿಕೊಂಡರು. 'ಸರ್ವಸಂಘ ಪರಿತ್ಯಕ್ತನಾದ ನಾನು ಭವಬಂಧನದ ಬಲೆಯಲ್ಲಿ ಬಿದ್ದವರನ್ನು ಹೇಗೆಂದು ಹರಸಲಿ?' ಎಂದು ವಿರೋಧಾಭಾಸದ ಹುಸಿನಗೆ ನಕ್ಕ. ಆಸೆಯೇ ದುಃಖಕ್ಕೆ ಹೇಗೆ ಮೂಲ ಕಾರಣವಾಗುತ್ತದೆಯೆಂದು ವಿವರಿಸಿದ. 'ಆಸೆಯನ್ನು ಗೆದ್ದರೆ ದುಃಖ ಇರುವುದಿಲ್ಲ, ಆಸೆಯನ್ನು ತೊರೆದರೆ ದುಃಖವನ್ನು ಕೊನೆಗಾಣಿಸಲು ಸಾಧ್ಯ' ಎಂದು ತಾನು ಕಂಡುಕೊಂಡ ಪರಮಸತ್ಯಗಳನ್ನು ಅತೀ ಸರಳವಾಗಿ ಜನರಾಡುತ್ತಿದ್ದ ಪಾಲಿಭಾಷೆಯಲ್ಲೇ ಹೇಳುತ್ತಿದ್ದ. ಅದುವರೆಗಿನ ಸನ್ಯಾಸಿಗಳೆಲ್ಲ ತಮ್ಮ ಪ್ರವಚನವನ್ನು ಸಂಸ್ಕೃತದಲ್ಲಿ ಹೇಳುತ್ತಿದ್ದುದರಿಂದ ಜನಸಾಮಾನ್ಯರಿಗೆ ಅದು ಅರ್ಥವಾಗದೇ, ಅರೆಬರೆ ಅರ್ಥವಾದರೂ, ಸಂಪೂರ್ಣ ಅರ್ಥ ಆಯಿತೆನ್ನುವಂತೆ ನಟಿಸುತ್ತಿದ್ದರು. ಅರಮನೆಯಿಂದ ಕೂಲಿಕಾರ್ಮಿಕರವರೆಗೆ ಎಲ್ಲರಿಗೂ ಅರ್ಥವಾಗುವಂತೆ ಸಿದ್ಧಾರ್ಥ ಹೇಳುತ್ತಿದ್ದುದರಿಂದ ಜನರಿಗೆ ಸಂವಹನ ಸುಲಭವಾಗಿ ಎಲ್ಲರೂ ತಲೆದೂಗುತ್ತಾ ಆತನ ವಿಚಾರ ಪ್ರಬೋಧನೆಗೆ ಮಾರುಹೋಗುತ್ತಿದ್ದರು. ಇನ್ನೇನು ಸಿಂಹಾಸನವನ್ನೇರುವವನಿದ್ದ ನಂದನನೂ ಅಣ್ಣನ, ಅಲ್ಲಲ್ಲ ಸಿದ್ಧಾರ್ಥನ, ಮಾತಿಗೆ ಮರುಳಾದ. ಆತನ ಪತ್ನಿ ಕಲ್ಯಾಣಿಯೂ ಹಿಂಬಾಲಿಸಿದಳು. ಹಿಂದೆ ಸಿದ್ಧಾರ್ಥನ ಸಂಸರ್ಗದಲ್ಲಿದ್ದ ವಾರಿಗೆಯಲ್ಲಿ ಅಣ್ಣನಾದ ಅನಿರುದ್ಧ, ತಮ್ಮನಾದ ಮಹಾನಾಮ, ಗೆಳೆಯನಾದ ಆನಂದರ ಜೊತೆ ಮಗನಾದ ರಾಹುಲರಾದಿಯಾಗಿ ಶಾಕ್ಯ ಅರಸೊತ್ತಿಗೆಯ ಬಹುಪಾಲು ಎಲ್ಲರೂ ಸಂಘವನ್ನು ಸೇರಿದರು. ಊರೊಳಗಿನ ಸಾವಿರಾರು ಮಂದಿ ನಾ ಮುಂದು ತಾ ಮುಂದು ಎಂದು ಮುಂದೆ ಬಂದರು. ಭಿಕ್ಕುಗಳಿಗೆ ಬೇರೆ, ಸಾಮಾನ್ಯ ಸಂಸಾರಿಗಳಿಗೆ ಬೇರೆ ಬೇರೆಯಾದ ನೀತಿ ನಿಯಮಗಳನ್ನು ಬೋಧಿಸಿದ. ಇಡೀ ಕಪಿಲವಸ್ತುವೇ ಒಮ್ಮೆ 'ಬುದ್ಧಂ ಶರಣಂ' ಎಂದಿತು. ನಾನೂ ಹಿಂಬಾಲಿಸಿದೆ.

(ಸಶೇಷ)